ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ತ್ಯಾಜ್ಯ ಮುಕ್ತ ಹಳ್ಳಿಗಳತ್ತ ಪುತ್ತೂರು ದಾಪುಗಾಲು

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಗ್ರಾಮೀಣ ಕರ್ನಾಟಕವನ್ನು ಸಂಪೂರ್ಣ ಸ್ವಚ್ಛತೆಯ ಹಾದಿಯಲ್ಲಿ ಮುನ್ನಡೆಸುವ ಉದ್ದೇಶದೊಂದಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮನೆಹಂತದಲ್ಲಿಯೇ ಹಸಿ ಕಸ, ಒಣ ಕಸದ ವಿಂಗಡಣೆ, ಸ್ವಚ್ಛತಾ ವಾಹಿನಿ ಮೂಲಕ ಕಸದ ಸಂಗ್ರಹ, ಸ್ವಚ್ಛ ಸಂಕೀರ್ಣ, ಘನತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಕಸದ ಸೂಕ್ತ ವಿಲೇವಾರಿ, ಮರುಬಳಕೆ ಮಾಡಲಾಗುತ್ತಿದೆ. ಇದರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕೂ ವ್ಯವಸ್ಥಿತ ರೀತಿಯಲ್ಲಿ ತ್ಯಾಜ್ಯದ ವಿಲೇವಾರಿ ಮಾಡುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದೆ.

ಹಾಲಿ ಹಣಕಾಸು ವರ್ಷಾಂತ್ಯದೊಳಗೆ ಶೇ.100 ಕಸ ಸಂಗ್ರಹ ಗುರಿಯನ್ನು ಹೊಂದಿರುವ ಪುತ್ತೂರು ತಾಲ್ಲೂಕಿನ 22 ಗ್ರಾ.ಪಂಗಳ ಪೈಕಿ ಬೆಟ್ಟಂಪಾಡಿ, ಕೆದಂಬಾಡಿ, ಕೋಡಿಂಬಾಡಿ, ನರಿಮೊಗರು, ನಿಡ್ಪಳ್ಳಿಗಳಲ್ಲಿಕಸ ಸಂಗ್ರಹಿಸಲು ತಾತ್ಕಾಲಿಕ ಶೆಡ್ ಗಳು ಇದ್ದು, ಉಳಿದ 17 ಗ್ರಾಪಂಗಳಲ್ಲಿ ವೈಜ್ಞಾನಿಕ ಸ್ವಚ್ಛಸಂಕೀರ್ಣ ಘಟಕಗಳಿವೆ. 22 ಕಡೆಯೂ ಸ್ವಚ್ಛವಾಹಿನಿ ವಾಹನಗಳಿದ್ದು, ಸಂಜೀವಿನಿ ಒಕ್ಕೂಟಗಳ ಮೂಲಕ ಮನೆ ಮನೆ ಕಸ ಸಂಗ್ರಹ ಕಾರ್ಯವು ವ್ಯವಸ್ಥಿತವಾಗಿ ನಡೆಯುತ್ತಿದೆ.

ಒಣ, ಹಸಿ ಮತ್ತು ಅಪಾಯಕಾರಿ ತ್ಯಾಜ್ಯಗಳ ಪೈಕಿ ಹಸಿ ಕಸವನ್ನು ಮನೆಯವರೇ ವಿಲೇವಾರಿ ಮಾಡುತ್ತಿದ್ದು, ಒಣ ಕಸವನ್ನು ಸಂಜೀವಿನಿ ಒಕ್ಕೂಟದವರು ಸಂಗ್ರಹಿಸಿ ಸ್ವಚ್ಛಸಂಕೀರ್ಣ ಘಟಕಗಳಿಗೆ ರವಾನಿಸುತ್ತಾರೆ. ನ್ಯಾಪ್ಕಿನ್, ಡಯಾಪರ್ ಮುಂತಾದ ಕಸವನ್ನು ಮನೆಯವರು ಪ್ರತ್ಯೇಕ ಪೇಪರ್‌ನಲ್ಲಿ ಕಟ್ಟಿ ಕೆಂಪು ಗುರುತು ಮಾಡಿಕೊಡಲು ಸೂಚಿಸಲಾಗಿದೆ.

### ಹಸಿ ತ್ಯಾಜ್ಯ ಘಟಕ:

ಕಬಕ, ಒಳಮೊಗ್ರು ಮತ್ತು ನೆಕ್ಕಿಲಾಡಿಗಳಲ್ಲಿ ಒಣ ತ್ಯಾಜ್ಯ ಸಂಗ್ರಹ ಘಟಕದ ಜತೆಗೆ ಹಸಿ ತ್ಯಾಜ್ಯ ನಿರ್ವಹಣಾ ಘಟಕವೂ ಇದೆ. ಕೊಳ್ತಿಗೆ ಹಾಗೂ ನೆಟ್ಟಣಿಗೆಗಳಿಗೆ ಮಲ ತ್ಯಾಜ್ಯ ನಿರ್ವಹಣಾ ಘಟಕ (ಎಫ್ಎಸ್ ಟಿಪಿ-ಫೀಕಲ್ ಸ್ಲಜ್ ಟ್ರೀಟ್‌ಮೆಂಟ್‌ಪ್ಲ್ಯಾಂಟ್) ಮಂಜೂರಾಗಿದೆ. ಕೆದಂಬಾಡಿ ಗ್ರಾಮದಲ್ಲಿ ಎಂಆರ್‌ಎಫ್ ಘಟಕವಿದ್ದು, 3 ತಾಲ್ಲೂಕುಗಳ 66 ಗ್ರಾಪಂಗಳ ಒಣ ತ್ಯಾಜ್ಯವನ್ನು ಇಲ್ಲಿ ಸ್ವೀಕರಿಸಲಾಗುತ್ತಿದೆ. ನೆಟ್ಟಣಿಗೆ ಮುನ್ನೂರು ಸ್ವಚ್ಛ ಸಂಕೀರ್ಣ ಘಟಕದಲ್ಲಿ ನರೇಗಾದಡಿ ನರ್ಸರಿ ಬೆಳೆಸಲಾಗಿದೆ.

### ಸಂಜೀವಿನಿ ಒಕ್ಕೂಟದ ಕಾರ್ಯಜಾಲ:

"ಸಂಜೀವಿನಿ ಗ್ರಾಪಂ ಮಟ್ಟದ ಒಕ್ಕೂಟ ಮಹಿಳಾ ಸದಸ್ಯರ ನೋಂದಾಯಿತ ಸಂಸ್ಥೆ, ದೀನ್ ದಯಾಳ್ ಉಪಾಧ್ಯಾಯ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ(ಡೇ-ಎನ್ಆರ್ ಎಲ್ಎಂ) ಮೂಲಕ ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಗೆ ಅನೇಕ ಯೋಜನೆಗಳು ಒಕ್ಕೂಟದ ಮೂಲಕ ಜಾರಿಯಾಗುತ್ತಿವೆ. ಒಣ ಕಸ ಸಂಗ್ರಹಕ್ಕೂ ಒಕ್ಕೂಟದ ಜತೆ ಒಪ್ಪಂದ ಮಾಡಲಾಗಿದೆ. ಸ್ವಚ್ಛವಾಹಿನಿ, ಸಂಗ್ರಹ ಘಟಕ ಮುಂತಾದ ಮೂಲಸೌಕರ್ಯ ಕಲ್ಪಿಸಲಾಗುತ್ತದೆ.

ಒಕ್ಕೂಟದವರು ತಮ್ಮ ಸದಸ್ಯೆಯರನ್ನೇ ಚಾಲಕಿ, ಸಿಬ್ಬಂದಿಗಳಾಗಿ ನೇಮಿಸಿಕೊಳ್ಳಬೇಕು. ಮನೆಗಳಿಂದ ಕಸ ಪಡೆದು ಶುಲ್ಕ ಸಂಗ್ರಹಿಸಬೇಕು. ಇದನ್ನು ಹೊರತಾದ ಹೆಚ್ಚುವರಿ ಖರ್ಚನ್ನು (ಅಂತರ ಧನ) ಗ್ರಾಪಂ ಭರಿಸುತ್ತದೆ. ಶೇ.100 ಕಸ ಸಂಗ್ರಹ ನಡೆದಾಗ ಈ ಶುಲ್ಕದಿಂದಲೇ ತಿಂಗಳ ಖರ್ಚು ಸರಿದೂಗುವ ಕಾರಣ ಬಳಿಕ ಗ್ರಾಪಂ ಅನುದಾನದ ಅಗತ್ಯವಿರುವುದಿಲ್ಲ. ಬದಲಾಗಿ ಶುಲ್ಕದ ಮೊತ್ತದಲ್ಲೇ ಒಕ್ಕೂಟ ಹಣ ಉಳಿತಾಯ ಮಾಡಬಹುದು. ಒಕ್ಕೂಟವೇ ನಿರ್ಣಯಿಸಿ ಸಿಬ್ಬಂದಿ ಗೌರವಧನ ಹೆಚ್ಚಿಸಬಹುದು. ಶೇ.100 ಕಸ ಸಂಗ್ರಹ ಆದಲ್ಲಿ ಸಿಬ್ಬಂದಿಗೆ ಪೂರ್ತಿ ಕೆಲಸವೂ ಸಿಗುತ್ತದೆ.

ಡಿಸೆಂಬರ್ ಅಂತ್ಯಕ್ಕೆ ಮನೆ ಮನೆ ಕಸ ಸಂಗ್ರಹದಲ್ಲಿ ಶೇ.80 ಸಾಧನೆಯಾಗಿದ್ದು, ಮುಂದಿನ ಕೆಲವೇ ಸಮಯದಲ್ಲಿ ಶೇ.100 ಸಾಧನೆ ಮಾಡುವ ಗುರಿ ಇದೆ. ಎಲ್ಲಾ ಮೂಲಸೌಕರ್ಯ ಮಾಡಿಕೊಡಲಾಗಿದೆ."

**-ನವೀನ್ ಕುಮಾರ್ ಭಂಡಾರಿ,**
**ತಾ.ಪಂ ಕಾರ್ಯನಿರ್ವಹಣಾಧಿಕಾರಿ, ಪುತ್ತೂರು**

"ಸಂಜೀವಿನಿ ಗ್ರಾಪಂ ಮಟ್ಟದ ಒಕ್ಕೂಟ(ಜಿಪಿಎಲ್ಎಫ್) ಜತೆ ಮಾಡಿಕೊಂಡ ಒಡಂಬಡಿಕೆ ಪ್ರಕಾರ ಒಕ್ಕೂಟದವರು ಕಸ ಸಂಗ್ರಹಿಸುತ್ತಿದ್ದಾರೆ. ಮಾಹಿತಿ, ಶಿಕ್ಷಣ ಮತ್ತು ಸಮನ್ವಯ(ಐಇಸಿ) ಮೂಲಕ ಯೋಜನೆ ಯಶಸ್ವಿಗೊಳಿಸಲು ಪ್ರಯತ್ನಿಸಲಾಗುತ್ತಿದೆ."

**-ಜಗತ್ ಕೆ., ಕಾರ್ಯಕ್ರಮ ವ್ಯವಸ್ಥಾಪಕರು,**
**ಡೇ-ಎನ್ಆರ್ಎಲ್ಎಂ, ಪುತ್ತೂರು**

**ಪಂಚಾಯಿತಿವಾರು ಸಾಧನೆ:**
ನರಿಮೊಗರು ಗ್ರಾಪಂನಲ್ಲಿ **650**, ಕೆದಂಬಾಡಿ-**570**, ಆರ್ಯಾಪು- **550**, ಕಬಕ-**455,** ಮನೆಗಳ ಕಸ ಸಂಗ್ರಹ ನಡೆಯುತ್ತಿದ್ದು ಇವುಗಳು ಮೊದಲ **5 ಸ್ಥಾನ ಅಲಂಕರಿಸಿವೆ.**

